ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ
ಸಿ.ಸಿ. ನಂಬ್ರ:2748/2015

ಚಾಸಾಃ 13 ಪ್ರಾಸಾಃ6
ದಿನಾಂಕಃ 17.11.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ನಾಸೀರ್ ಹುಸೇನ್ |
| ತಂದೆಯ ಹೆಸರು | : | ಲೇಟ್ ಇಬ್ರಾಹಿಂ ಕಲೀಲ್ ಸಾಬ್ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ಪಿ ಎಸ್ ಐ |
| ವಾಸ ಸ್ಥಳ | : | ಶಂಕರನಾರಾಯಣ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ನಾನು 2014 ರಿಂದ 2017ರವರೆಗೆ ಕುಂದಾಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 26-01-2015 ರಂದು ಚಾಸಾ-12 ರವರಿಂದ ಕಡತವನ್ನು ಸ್ವೀಕರಿಸಿ ತನಿಖೆಯನ್ನು ಮುಂದುವರೆಸಿ ತಕ್ಷೀರು ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-9 ಮತ್ತು 10 ರವರ ಸಮಕ್ಷಮದಲ್ಲಿ ಪಂಚನಾಮೆಯನ್ನು ಬೆಳಗ್ಗೆ 11-30 ರಿಂದ 12-30ರವರೆಗೂ ಜರುಗಿಸಿ ನಕ್ಷೆ ತಯಾರಿಸಿ ಪೋಟೋವನ್ನು ತೆಗೆದಿರುತ್ತೇನೆ. ಸ್ಥಳದಲ್ಲಿ ಇದ್ದ ಬಾಟಲಿ ತುಂಡುಗಳು, 2 ಕಲ್ಲುಗಳು, ಹಂಚಿನ ತುಂಡು, ಕಿಟಕಿ ಗಾಜಿನ ಚೂರುಗಳು, ಸಿಮೆಂಟ್ ಶೀಟ್ ನ ತುಂಡು, ಶಿಲೆ ಕಲ್ಲು ಒಟ್ಟು 6ನ್ನು ವಶಕ್ಕೆ ಪಡೆದಿರುತ್ತೇನೆ. ಸ್ಥಳದಲ್ಲಿ ಸುಮಾರು 10 ಸಾವಿರ ನಷ್ಟವಾಗಿರುವುದನ್ನು ಮಾಪಿಸಿ ಪಕ್ಕದಲ್ಲಿ ನಿಂತಿದ್ದ ಕೆಎ-20-ಎನ್7496 ಕಾರನ್ನು ತೋರಿಸಿಕೊಟ್ಟಿದ್ದು ಅದರ ಮಧ್ಯದ ಎಡಭಾಗದ ಗಾಜು ತುಂಡಾಗಿದ್ದು, ಬಾಗಿಲಿನ ತಗಡು ಜಖಂಗೊಂಡಿದ್ದು, ಕಾರಿನ ಒಳಗೆ ಶಿಲೆ ಕಲ್ಲು ಇದ್ದು, ಒಟ್ಟಾರೆ ಕಾರಿನ ಜಖಂನಿಂದ ರೂಪಾಯಿ 25,000/- ನಷ್ಟವಾಗಿರುತ್ತದೆ.

ಕಾರನ್ನು ಸ್ಥಳದಲ್ಲಿ ಪೋಟೋ ತೆಗೆದು ಪರಿಶೀಲಿಸಿ ಮಾಲೀಕರಿಗೆ ಬಿಟ್ಟು ಕೊಟ್ಟು ರಶೀದಿ ಪಡೆದಿರುತ್ತೇನೆ. ನಂತರ ಸ್ವತ್ತುಗಳನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿರುತ್ತೇನೆ. ನಂತರ ಚಾಸಾ-2 ರಿಂದ 7 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಚಾಸಾ-1 ರವರ ಮರುಹೇಳಿಕೆ ಪಡೆದಿರುತ್ತೇನೆ.

ದಿಃ 26-01-2015 ರಂದು ಮನೆಯ ಪಹಣಿ ಪತ್ರವನ್ನು ಸ್ವೀಕರಿಸಿರುತ್ತೇನೆ. ಕಾರಿನ ದಾಖಲಾತಿಗಳನ್ನು ಪಡೆದಿರುತ್ತೇನೆ.

ದಿಃ 01-02-2015 ರಂದು ವೈದ್ಯಾಧಿಕಾರಿಯವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿ ಚಾಸಾ-2 ರಿಂದ 5 ಮತ್ತು 7ರವರ ಗಾಯದ ಪ್ರಮಾಣ ಪತ್ರಗಳನ್ನು ಸ್ವೀಕರಿಸಿರುತ್ತೇನೆ. ನಂತರ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮುಮಾ1 ರಿಂದ 8ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನಿಪಿ-2ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನಿಪಿ-3, 6ರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-3(ಬಿ), 6(ಸಿ) ಎಂದು ಗುರುತಿಸಲಾಯಿತು. ನಕ್ಷೆ, ಕಾರಿನ ಒಳಗಿನ ಪೋಟೋ, ಘಟನಾ ಸ್ಥಳದ 6 ಪೋಟೋಗಳು, ಕೋಟೇಶ್ವರ ಗ್ರಾಮದ ಸರ್ವೆ ನಂಬ್ರ 6/20ಪಿ-4 ರ ಪಹಣಿ, 6 ಗಾಯದ ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-7 ರಿಂದ 21 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-7(ಎ),16(ಎ) ರಿಂದ 21(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಪಿ ಜೆ ಎಸ್ ರವರಿಂದಃ</u>**

ಈ ಪ್ರಕರಣದ ಸಂಪೂರ್ಣ ತನಿಖೆ ಮಾಡಿ ಅಂತಿಮ ವರದಿಯನ್ನು ನಾನೇ ಸಲ್ಲಿಸಿರುತ್ತೇನೆ ಎಂದರೆ ಸರಿ. ಈ ಪ್ರಕರಣದ ಎಲ್ಲಾ ಸ್ವತಂತ್ರ ಸಾಕ್ಷಿದಾರರು ಮುಸ್ಲಿಂ ಸಮುದಾಯಕ್ಕೆ ಸೇರಿದವರು ಎಂದರೆ ಸರಿ. ಸ್ಥಳೀಯರಾದ ನಿಪಿ- 7ರಲ್ಲಿ ಕಂಡು ಬರುವಂತಹ ಫ್ರಾನ್ಸಿಸ್ ಫೆರ್ನಾಂಡಿಸ್ ದೊಡ್ಡಮ್ಮ ಪೂಜಾರ್ತಿ, ಅಣ್ಣಪ್ಪ ಪೂಜಾರಿರವರನ್ನು ಸಾಕ್ಷಿದಾರರಾಗಿ ಕಾಣಿಸಿಲ್ಲ ಎಂದರೆ ಸರಿ. ಚಾಸಾ-9 ರವರು ಘಟನೆಯ ಪ್ರತ್ಯಕ್ಷದರ್ಶಿ ಅಲ್ಲ ಎಂದರೆ ಸರಿ. ನಾನು ಮತ್ತು ಚಾಸಾ-1 ರವರು ಸೇರಿ ಸೃಷ್ಟಿಸಿದ ಸುಳ್ಳು ಪ್ರಕರಣವಾಗಿರುತ್ತದೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಯಾವುದೇ ಸಾಕ್ಷಿದಾರರು ನನ್ನ ಸಮಕ್ಷಮ ಪ್ರಕರಣಕ್ಕೆ ಪೂರಕವಾಗಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳನ್ನು ಠಾಣೆಯಲ್ಲಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಮುಮಾ1 ರಿಂದ 8ಕ್ಕೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸರಿಯಾದ ತನಿಖೆ ಮಾಡದೆ ಆರೋಪಿತರ ವಿರುದ್ದ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**